ದಿನಾಂಕಃ 20-08-2018 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋದಿಸಲಾಯಿತು.

-ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಜಿ ಜಿ ಜಿ ವಕೀಲರಿಂದ-

ಜಿಲ್ಲಾ ನೋಂದಣಾಧಿಕಾರಿಗಳು ಚಾಲ್ತಿ ಮಾರುಕಟ್ಟೆ ಬೆಲೆಯ ಧೃಡೀಕೃತ ನಕಲು ಹಾಜರುಪಡಿಸಿದ್ದು ಅದನ್ನು ನಿಪಿ-26 ಎಂದು, ಮತ್ತೊಂದು ಜಿಲ್ಲಾ ನೋಂದಣಾಧಿಕಾರಿಗಳು ಚಾಲ್ತಿ ಮಾರುಕಟ್ಟೆ ಬೆಲೆಯ ಧೃಡೀಕೃತ ನಕಲು ಹಾಜರುಪಡಿಸಿದ್ದು ಅದನ್ನು ನಿಪಿ-27 ಎಂದು, ದಿಃ 18-04-2017 ರಂದು ನನಗೆ ಬಂದ ನೋಟೀಸನ್ನು ಹಾಜರುಪಡಿಸಿದ್ದು ಅದನ್ನು ನಿಪಿ-28 ಎಂದು, ದಿಃ 25-04-2017 ರ ಆದೇಶದ ಧೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-29 ಎಂದು, ನಾನು ದಿಃ 23-11-2009 ರಂದು ಮಾಡಿಕೊಂಡ ಕ್ರಯದ ಕರಾರು ಪತ್ರದ ಮೇಲೆ ಕಟ್ಟಿದ್ದ ಮುಧ್ರಾಂಕ ಶುಲ್ಕದ ಬಗ್ಗೆ ಜಿಲ್ಲಾ ನೋಂದಣಾಧಿಕಾರಿಗಳು ನನಗೆ ನೀಡಿದ ರಸೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-30 ಎಂದು ಗುರುತಿಸಲಾಯಿತು.

ದಿಃ 23-11-2009 ರಂದು ಮಾಡಿಕೊಂಡ ಒಂದು ಕ್ರಯದ ಕರಾರು ಪತ್ರವನ್ನು ಹಾಜರುಪಡಿಸಿದ್ದು ಪ್ರತಿವಾದಿ ಪರ ವಕೀಲರು ಸದರಿ ಕ್ರಯ ಕರಾರು ಪತ್ರದ ಮೇಲೆ ಮುಧ್ರಾಂಕ ಶುಲ್ಕವನ್ನು ಕಟ್ಟಿದ್ದರೂ ಸಹ ಅದನ್ನು ಗುರುತಿಸಲು ಬರುವುದಿಲ್ಲ ಎಂದು ಹೇಳಿರುತ್ತಾರೆ. ಅವರ ಪ್ರಾರ್ಥನೆಯನ್ನು ತಿರಸ್ಕರಿಸಿ ಸದರಿ ಕ್ರಯ ಕರಾರು ಪತ್ರದ ಮೇಲೆ ನಿಪಿ - 28 ಮತ್ತು 29 ರ ಪ್ರಕಾರ ಜಿಲ್ಲಾ ನೋಂದಣಾಧಿಕಾರಿಗಳವರ ಆದೇಶದಂತೆ ಮುಧ್ರಾಂಕ ಶುಲ್ಕವನ್ನು ಕಟ್ಟಿದ್ದರಿಂದ ಸದರಿ ಕ್ರಯದ ಕರಾರು ಪತ್ರವನ್ನು ನಿಪಿ-31 ಎಂದು ಗುರುತಿಸಲಾಯಿತು. ದಾವಾ ಸ್ವತ್ತಿನ ಜಮೀನು ಕ್ರಯದ ಕರಾರು ಪತ್ರವನ್ನು ನನಗೆ1. ಗುಂಡಪ್ಪ, 2. ಮಹಲಿಂಗಪ್ಪ, ಮತ್ತು 3. ರಾಮಕೃಷ್ಣಪ್ಪ ಬರೆದುಕೊಟ್ಟಿರುತ್ತಾರೆ. ಸದರಿ ಕ್ರಯದ ಕರಾರು ಪತ್ರಕ್ಕೆ ಅವರು ಸಹಿ ಹಾಕಿರುತ್ತಾರೆ. ಸದರಿಯವರ ಸಹಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ನಿಪಿ-31 ತೋರಿಸಿ ಅದರಲ್ಲಿ ಗುಂಡಪ್ಪ ಅವರ ಸಹಿ ಗುರುತಿಸಿದ್ದರಿಂದ ಅದನ್ನು ನಿಪಿ-31(ಎ) ಎಂದು, ಮಹಲಿಂಗಪ್ಪ ಅವರ ಸಹಿಯನ್ನು ನಿಪಿ-31(ಬಿ) ಎಂದು, ರಾಮಕೃಷ್ಣಪ್ಪ ಅವರ ಸಹಿಯನ್ನು ನಿಪಿ-31(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರಿದು ಸದರಿ ನಿಪಿ-31 ಕ್ಕೆ ಇಬ್ಬರು ಸಾಕ್ಷಿದಾರರಾಗಿ ಸಹಿ ಹಾಕಿರುತ್ತಾರೆ, ಅವರ ಹೆಸರು 1. ಹೆಚ್.ಡಿ. ಗಂಗಾಧರ ಮತ್ತು 2. ಕರಿಯಣ್ಣ. ಸಾಕ್ಷಿಯು ನಿಪಿ-31 ರ ಮೇಲಿರುವ ಸಾಕ್ಷಿದಾರರ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಹೆಚ್ ಡಿ ಗಂಗಾಧರ ಅವರ ಸಹಿಯನ್ನು ನಿಪಿ-31(ಡಿ) ಎಂದು, ಕರಿಯಣ್ಣನವರ ಸಹಿಯನ್ನು ನಿಪಿ-31(ಇ) ಎಂದು ಗುರುತಿಸಲಾಯಿತು. ನಿಪಿ-31 ಹೆಚ್ ಡಿ ಗಂಗಾಧರ ಇವರು ಬರವಣಿಗೆಯನ್ನು ಮಾಡಿರುತ್ತಾರೆ. ಸದರಿ ಪತ್ರವನ್ನು ಬರೆದಿರುವ ಬಗ್ಗೆ ಪತ್ರ ಬರಹಗಾರರು ಸಹಿ ಹಾಕಿರುತ್ತಾರೆ. ಸದರಿ ಪತ್ರ ಬರಹಗಾರರ ಸಹಿಯನ್ನು ನಿಪಿ-31(ಎಫ್) ಎಂದು ಗುರುತಿಸಲಾಯಿತು. ನಿಪಿ-31 ನ್ನು ಬರೆಯುವುದಕ್ಕೆ ಮಾಹಿತಿಯನ್ನು ಕೊಟ್ಟವರು 1. ಗುಂಡಪ್ಪ, 2. ಮಲಿಂಗಪ್ಪ ಮತ್ತು 3. ರಾಮಕೃಷ್ಣ ರವರು ಹೇಳಿರುತ್ತಾರೆ.

ಆದ್ದರಿಂದ ನನ್ನ ದಾವೆಯಲ್ಲಿ ಕೇಳಿದ ಪರಿಹಾರವನ್ನು ಕೊಡಲು ನ್ಯಾಯಾಲಯಕ್ಕೆ ಕೇಳಿಕೊಳ್ಳುತ್ತೇನೆ.

ಪ್ರತಿವಾದಿ ಪರ ವಕೀಲರು ಪಾಟಿಸವಾಲಿಗೆ ಕಾಲಾವಕಾಶ ಕೇಳಿದ್ದು ಆಲಿಸಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ , ಹಿರಿಯೂರು.